# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.174 ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಸಮಿತಿ ಸಭೆಯ ನಡುವಳಿಗಳು

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020–21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 07.11.2020 ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ಸಭೆಯನ್ನು ನಡೆಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

ಉಪಸ್ಥಿತರು:

| ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು | |
|---|---|
| 1. | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ |
| 2. | ಶ್ರೀ ರವಿ.ಡಿ ಕಾರ್ಯದರ್ಶಿ, ಸಹಾಯಕ ಅಭಿಯಂತರರು |
| 3. | ಶ್ರೀ ಟಿ ಹನುಮಂತರಾಯ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ |
| 4. | ಶ್ರೀಮತಿ ಲಕ್ಷ್ಮಿ.ಬಿ, ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಬಡಾವಣೆ |
| 5. | ಶ್ರೀ ಸಾಯಿಬಣ್ಣ ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್ಬಿ) |
| 6. | ಶ್ರೀ ವಿನಾಯಕ್ ಕೆ.ಎಸ್. ಸಹಾಯಕ ಅಭಿಯಂತರರು (ಬೇಸ್ಕಾಂ) |
| 7. | ಶ್ರೀ ಯತೀಶ್ ಸಹಾಯಕ ಅಭಿಯಂತರರು (ಬೇಸ್ಕಾಂ) |
| 8. | ಶ್ರೀ ವಿನೋದ್, ಹಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀ ಚಂದ್ರಶೇಖರ್ ಆರ್.ಡಬ್ಲ್ಯೂ.ಎ |
| 10. | ಶ್ರೀಮತಿ ಡಾ॥ ಶಾಂತಿ, ಆರ್.ಡಬ್ಲ್ಯೂ.ಎ |
| 11. | ಶ್ರೀ ಬಿ.ಎನ್.ಆರ್ ರೆಡ್ಡಿ, ಆರ್.ಡಬ್ಲ್ಯೂ.ಎ |
| 12. | ಶ್ರೀ ರವಿ.ಬಿ, ಆರ್.ಡಬ್ಲ್ಯೂ.ಎ |

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು

ಹಿಂದಿನ ಸಭಾ ನಡುವಾಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ ಇಂಜಿಯರಿಂಗ್, ಘನತ್ಯಾಜ್ಯ ನಿರ್ವಹಣೆ ಮತ್ತು ಕೋವಿಡ್–19 ತಂಡಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿಯವರು ತಿಳಿಸಿದರು.

Scanned with Car

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | ಪಶು ಸಂಗೋಪನೆ | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು, ದ್ವಿಚಕ್ರ ಮತ್ತು ನಾಲ್ಕು ಚಕ್ರಗಳ ವಾಹನಗಳಿಗೆ ಹಿಂಬಾಲಿಸುರುವುದರಿಂದ ಸಾರ್ವಜನಿಕರಿಗೆ ಮತ್ತು ಸ್ಥಳೀಯರಿಗೆ ಗಾಬರಿ ಉಂಟಾಗಿದ್ದು, ದ್ವಿಚಕ್ರ ಸವಾರರು ಬೀಳುವ ಸಾಧ್ಯತೆ ಇರುತ್ತದೆ ಹಾಗೂ ಹಂದಿಗಳ ಹಾವಳಿಯ ಸಮಸ್ಯೆಯನ್ನು ಬಗೆ ಹರಿಸಲು ಸಂಬಂಧಪಟ್ಟ ಸಹಾಯಕ ನಿರ್ದೇಶಕರು (ಪಶು ಸಂಗೋಪನೆ ಬೊಮ್ಮನಹಳ್ಳಿ ವಲಯ) ಕ್ರಮ ವಹಿಸುವಂತೆ ಕಾರ್ಯದರ್ಶಿ ರವರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ:–** ಸಹಾಯಕ ನಿರ್ದೇಶಕರು (ಪಶುಸಂಗೋಪನೆ ಬೊಮ್ಮನಹಳ್ಳಿ ವಲಯ) |
| 2 | ಕಸ ವಿಲೇವಾರಿ ಮತ್ತು ಘನತ್ಯಾಜ್ಯ ನಿರ್ವಹಣೆ | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯ 15ನೇ ಅಡ್ಡ ರಸ್ತೆ, ಸಿ.ಪಿ.ಡಬ್ಲ್ಯೂ.ಡಿ. ಕ್ವಾರ್ಟಸ್, ಹಿಂಭಾಗ 1ನೇ ಸೆಕ್ಟರ್, ಹಸಿ ಕಸ ಮತ್ತು ಒಣ ಕಸವನ್ನು ಸಾರ್ವಜನಿಕರು ಮತ್ತು ಸ್ಥಳೀಯರು ಸ್ಥಳದಲೇ ಕಸವನ್ನು ಹಾಕಿ ಬೆಂಕಿ ಹಚ್ಚಿರುವುದರಿಂದ ಸಾಂಕ್ರಾಮಿಕ ರೋಗ / ಆಸ್ತಮ ರೋಗಿಗಳಿಗೆ ತೊಂದರೆಯಾಗುವ ಸಾಧ್ಯತೆಗಳು ಇರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.<br>ಕ್ರಮ :– ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 174 |
| 3 | ತೋಟಗಾರಿಕೆ (ಉದ್ಯಾನವನಗಳ ನಿರ್ವಹಣೆ) | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯ 2ನೇ ಸೆಕ್ಟರ್‌ಗೆ ಒಳಪಡುವ ಸ್ವಾತಂತ್ರ ಉದ್ಯಾನವನದ ಕಾಮಗಾರಿಯು ಪೂರ್ಣಗೊಂಡಿದ್ದರೂ ಸಹ ಉದ್ಘಾಟನೆಯಾಗಿರುವುದಿಲ್ಲ ಆದ್ದರಿಂದ ಉದ್ಯಾನವನದ ಸುತ್ತಮುಲ್ಲಿನ ನಿವಾಸಿಗಳಿಗೆ ಉದ್ಯಾನವನ್ನು ಉಪಯೋಗಿಸಿಕೊಳ್ಳಲು ಅನವು ಮಾಡಬೇಕೆಂದು ವಾರ್ಡ್ ಸಭೆಯಲ್ಲಿ ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಿರುತ್ತಾರೆ.<br>ಕ್ರಮ :– ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ |
| | ಬೀದಿ ದೀಪಗಳು (ವಿದ್ಯುತ್) | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯ, 24ನೇ ಮುಖ್ಯ ರಸ್ತೆ, ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಮತ್ತು ಸ್ಥಳೀಯರಿಗೆ ಓಡಾಡಲು ಕಷ್ಟವಾಗುತ್ತಿದ್ದು, ಹಾಗೂ ಸಾರ್ವಜನಿಕರು ಈಗಾಗಲೇ ದೂರವಾಣಿ ಮುಖಾಂತರ ದೂರುಗಳನ್ನು ನೀಡಿದ್ದರೂ ಸಹ ಅಧಿಕಾರಿಗಳು ಕ್ರಮ ವಹಿಸುತ್ತಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ತಿಳಿಸಿರುತ್ತಾರೆ. ಈ ಬಗ್ಗೆ ಸೂಕ್ತ ಪರಿಹಾರ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.<br>ಕ್ರಮ:– ಸಹಾಯಕ ಅಭಿಯಂತರರು ವಿದ್ಯುತ್ |
| 5 | ಯೋಜನಾ ವಿಭಾಗ ಬೊಮ್ಮನಹಳ್ಳಿ | ಹೆಚ್.ಎಸ್.ಆರ್ ಬಡಾವಣೆಯ ವಾರ್ಡ್ ವ್ಯಾಪ್ತಿಯ 19ನೇ ಮುಖ್ಯ ರಸ್ತೆ, 17ನೇ ಅಡ್ಡ ರಸ್ತೆ, ಸಾಯಿಬಾಬ ದೇವಸ್ಥಾನ ಹತ್ತಿರ ಇರುವ ಆಟದ ಮೈದಾನವನ್ನು ಕ್ರೀಡಾಂಗಣಕ್ಕಾಗಿ ಮಿಸಲಿಟ್ಟಿದ್ದು, ಈ ಬಗ್ಗೆ ಕ್ರೀಡಾಂಗಣವನ್ನಾಗಿ ಪರಿವರ್ತಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ಬಿ.ಬಿ.ಎ.ಂಪಿ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವಂತೆ ಕೋರಿರುತ್ತಾರೆ. ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು (ಯೋಜನಾ ವಿಭಾಗ) ರವರಿಗೆ ಕ್ರಮ ವಹಿಸುವಂತೆ ಕಾರ್ಯದರ್ಶಿಗಳಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>ಕ್ರಮ :– ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ) |

Scanned with Car

| | | |
|---|---|---|
| 6 | ಸಂಚಾರಿ ವಿಭಾಗ | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯ, 19ನೇ ಮುಖ್ಯ ರಸ್ತೆ, 17ನೇ ಅಡ್ಡ ರಸ್ತೆ, ನಂದಿನ ಕೂಲ್ ಜಾಯಿಂಟ್ ಸರ್ಕಲ್ ಹತ್ತಿರ ಟ್ರಾಫೀಕ್ ಸಿಗ್ನಲ್ ಇಲ್ಲದೆ ಇರುವುದರಿಂದ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು/ ಅಪಘಾತಗಳನ್ನು ಸಂಭವಿಸುತ್ತಿದೆ, ಆದ್ದರಿಂದ ಟ್ರಾಫೀಕ್ ಸಿಗ್ನಲ್ ಅಳವಡಿಸುವಂತೆ ವಾರ್ಡ್ ಸಮಿತಿ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ ರವರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು, ಟ್ರಾಫೀಕ್ ವಿಭಾಗ (ಕೇಂದ್ರ ಕಛೇರಿಗೆ ಬಿಬಿಎಂಪಿ) |
| 7 | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯಲ್ಲಿ, ಬೃಹತ್ ನೀರು ಗಾಲುವೆ ವಿಭಾಗದಿಂದ ಕಾಮಗಾರಿ ಪ್ರಗತ್ತಿಯಲ್ಲಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಇದರ ಮೇಲೆ ಅಗೆದು ರಸ್ತೆ ಡಾಂಬರೀಕರಣ ಮಾಡಿರುತ್ತಾರೆ ಎಂದು ವಾರ್ಡ್ ಸಮಿತಿ ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.<br>ಕ್ರಮ:- ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 8 | ಕಾಮಗಾರಿ ವಿಭಾಗ | ಹಿಂದಿನ ಸಭೆಯಲ್ಲಿ ಮೊಬೈಲ್ ಟವರ್ ಅನಧಿಕೃತವಾಗಿ ಅಳವಡಿಸಿರುವ ಕಟ್ಟಡದ ಮಾಲೀಕರ ವಿರುದ್ಧ ತೆಗೆದು ಕೊಂಡ ಕ್ರಮದ ಬಗ್ಗೆ ಅಧ್ಯಕ್ಷರು, ಸ.ಕಾ.ನಿ.ಅ. ಹೆಚ್.ಎಸ್.ಆರ್ ಉಪವಿಭಾಗ ರವರಿಗೆ ವರದಿಯ ಬಗ್ಗೆ ಕೇಳಿರುತ್ತಾರೆ. ಸ.ನಿ.ಕಾ.ಅ. ರವರು ಈಗಾಗಲೇ ಕಟ್ಟಡದ ಮಾಲೀಕರುಗಳಿಗೆ ಕೆ.ಎಂ.ಸಿ ಕಾಯ್ದೆ ಅಡಿಯಲ್ಲಿ ನೋಟಿಸ್ ಜಾರಿ ಮಾಡಲಾಗಿ, ಈ ಬಗ್ಗೆ ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳಿಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ** :- ಬೆಸ್ಕಾಂ ಅಧಿಕಾರಿಗಳು.<br>**ಪಾದಚಾರಿ ಮಾರ್ಗ** : ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗ ಅತಿಕ್ರಮಣ ಮಾಡಿ ಮಳಿಗೆ ಹಾಕಿರುವುದನ್ನು ತೆರವುಗೊಳಿಸುವಂತೆ/ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲವ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗಿದೆ.<br>ಕ್ರಮ : – ಸ.ಕಾ.ನಿ.ಅ ಹೆಚ್.ಎಸ್.ಆರ್ ಉಪವಿಭಾಗ |

ಅಂತಿಮವಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು (ಮಹಾದೇವಪುರ) ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತುರ್ತು ಕ್ರಮವಹಿಸಲು ಸೂಚಿಸಿದ್ದರೂ ಹಾಗೂ ಸಾರ್ವಜನಿಕರು/ಸಂಘದವರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಕ್ರಮ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಸಹಾಯಕ ಅಭಿಯಂತರು
ಹೆಚ್.ಎಸ್.ಆರ್.ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ನಂ.174
ಹೆಚ್.ಎಸ್.ಆರ್.ಬಡಾವಣೆ ಹಾಗೂ
ಜಂಟಿ ಆಯುಕ್ತರು ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with Car